# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1179 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್ ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | **23/12/2021** |
| ಉತ್ತರಿಸುವವರು | ಕಾರ್ಮಿಕ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಕಾರ್ಮಿಕ ಇಲಾಖೆಯ ವತಿಯಿಂದ ಕಳೆದ 2 ವರ್ಷಗಳಲ್ಲಿ ಎಷ್ಟು ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿದೆ; ಆದ್ದರಿಂದ ಪ್ರಯೋಜನ ಪಡೆದವರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ಕಾರ್ಮಿಕ ಇಲಾಖೆಯು ಯಾವುದೇ ಉದ್ಯೋಗ ಮೇಳಗಳನ್ನು ಆಯೋಜಿಸಿರುವುದಿಲ್ಲ. |
| ಆ) | ಕಾರ್ಮಿಕ ಕೌಶಲ್ಯ ಅಭಿವೃದ್ಧಿಗಾಗಿ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ; ಕಳೆದ 2 ವರ್ಷಗಳಲ್ಲಿ ಈ ಯೋಜನೆಗಳ ಪ್ರಯೋಜನ ಪಡೆದವರ ಸಂಖ್ಯೆ ಎಷ್ಟು; | ಕೃಷಿ ಕಾರ್ಮಿಕರು ಮತ್ತು ಗಾರ್ಮೆಂಟ್ಸ್ ನೌಕರರ ಕೌಶಲ್ಯಾಭಿವೃದ್ಧಿಗಾಗಿ ಕಾರ್ಮಿಕ ಇಲಾಖೆಯ ವತಿಯಿಂದ ಯಾವುದೇ ಯೋಜನೆಗಳನ್ನು ಹಮ್ಮಿಕೊಂಡಿರುವುದಿಲ್ಲ. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ 2017-18ನೇ ಸಾಲಿನಿಂದ 'ಶ್ರಮ ಸಾಮರ್ಥ್ಯಯೋಜನೆ' ಎಂಬ ಶೀರ್ಷಿಕೆಯಡಿ 'ಟ್ರೈನಿಂಗ್-ಕಮ್-ಟೂಲ್‌ಕಿಟ್' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ್ದು ಇದರಿಂದ ರಾಜ್ಯದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ತಮಗೆ ಬೇಕಾದ ವೃತ್ತಿ ಕೌಶಲ್ಯ ಮತ್ತು ನೈಪುಣ್ಯತೆಯನ್ನು ಪಡೆಯುವುದಲ್ಲದೇ, ಈ ತರಬೇತಿ ಪಡೆದ ಅರ್ಹಕಾರ್ಮಿಕರಿಗೆ ತಮ್ಮ ವೃತ್ತಿಗನುಗುಣವಾದ ಉತ್ತಮ ಗುಣಮಟ್ಟದ ಉಪಕರಣಗಳನ್ನು ಪಡೆಯುತ್ತಾರೆ. ಜೊತೆಗೆ, ಕಾರ್ಮಿಕರಿಗೆ ಜೀವನಕೌಶಲ್ಯ, ಆರೋಗ್ಯ ಮತ್ತು ಸ್ವಾಸ್ಥ್ಯಗಳ ಬಗ್ಗೆ ಅರಿವು ಮೂಡಿಸುವುದು, ರಕ್ಷಣಾತ್ಮಕ ಸಲಕರಣೆಯ ಉಪಯೋಗ, ಪ್ರಮಾಣಪತ್ರ ಮತ್ತು ಉದ್ಯೋಗಾವಕಾಶವನ್ನು ಕಲ್ಪಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ:<br><br>**ತರಬೇತಿ ಟೂಲ್‌ಕಿಟ್ ಕಾರ್ಯಕ್ರಮದ ಉದ್ದೇಶಗಳು:**<br>1. ರಾಜ್ಯದ ನೋಂದಾಯಿತ ಕಟ್ಟಡ ನಿರ್ಮಾಣ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಹಾಗೂ ಅವರ ಅವಲಂಬಿತರ ಕೌಶಲ್ಯ ಅಭಿವೃದ್ಧಿಗೊಳಿಸುವುದು / ಉನ್ನತಿಗೊಳಿಸುವುದು. |
| ಇ) | ಕೃಷಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಗಾರ್ಮೆಂಟ್ಸ್ ನೌಕಕರ ಕೌಶಲ್ಯ ಅಭಿವೃದ್ಧಿಗಾಗಿ ಯಾವ ರೀತಿಯ ಯೋಜನೆಗಳನ್ನು ಕಾರ್ಮಿಕ ಇಲಾಖೆಯ ವತಿಯಿಂದ ಹಮ್ಮಿಕೊಳ್ಳಲಾಗಿದೆ; ಈ ಕಾರ್ಯಕ್ರಮಗಳ ಪ್ರಯೋಜನ ಪಡೆದವರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | |

| | | |
|---|---|---|
| | | 2. ರಾಜ್ಯದಲ್ಲಿ ನಿರ್ಮಾಣ ಕ್ಷೇತ್ರದಲ್ಲಿ ದಕ್ಷಯುತವಾದ, ಆರೋಗ್ಯಕರ, ಯುಕ್ತ ಮತ್ತು ಕೌಶಲ್ಯ ಭರಿತ ಕಾರ್ಯನಿರ್ವಹಿಸುವ ಕಾರ್ಮಿಕರ ತಂಡವನ್ನು ರಚಿಸುವುದು.<br>3. ರಾಜ್ಯದ ಗ್ರಾಮೀಣ ಕ್ಷೇತ್ರದಲ್ಲಿ ಯುವ ಕಟ್ಟಡ ನಿರ್ಮಾಣ ಮತ್ತು ಇತರೆ ನಿರ್ಮಾಣ ಕಾರ್ಮಿಕರ ದಕ್ಷತೆಯನ್ನು ಹೆಚ್ಚಿಸುವುದು.<br>4. ನಿರ್ಮಾಣ ಕ್ಷೇತ್ರದಲ್ಲಿ ತೊಡಗಿದ ಕಾರ್ಮಿಕರಿಗೆ ಕಾರ್ಯಸುರಕ್ಷತೆ ಹಾಗೂ ಸ್ವಸ್ತತೆ ಬಗ್ಗೆ ಅರಿವು ಮೂಡಿಸುವುದು.<br>5. ಸ್ಥಳೀಯ ನಿರ್ಮಾಣ ಕಾರ್ಮಿಕರಿಗೆ ಉತ್ತಮ ಗುಣಮಟ್ಟದ ತರಬೇತಿ ನೀಡಿ, ರಾಜ್ಯದಲ್ಲಲ್ಲದೆ ಹೊರರಾಜ್ಯ ಹಾಗೂ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ತೊಡಗಿಸಿಕೊಳ್ಳಬಹುದಾದಂತಹ ನಿರ್ಮಾಣ ಕೌಶಲ್ಯವನ್ನುಅಭಿವೃದ್ಧಿ ಪಡಿಸುವುದು.<br><br>'ಶ್ರಮ ಸಾಮರ್ಥ್ಯ ಯೋಜನೆ'ಯಡಿಯಲ್ಲಿ 2019-20ನೇ ಸಾಲಿನಲ್ಲಿ 4,239 ಫಲಾನುಭವಿಗಳಿಗೆ ತರಬೇತಿ ನೀಡಲಾಗಿದೆ.<br><br>ಮಂಡಳಿಯಿಂದ RPL (Recognization of Prior Learning) ತರಬೇತಿಯನ್ನು ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ನೀಡಲು ಮಂಡಳಿಯ 2020-21ನೇ ಸಾಲಿನ ಆಯವ್ಯಯದಲ್ಲಿ ಸೇರ್ಪಡಿಸಿ, ಮಂಡಳಿಯಿಂದ ಕರ್ನಾಟಕ ರಾಜ್ಯದಾದ್ಯಂತ 1 ಲಕ್ಷ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಮತ್ತು ಅವರ ಅವಲಂಬಿತರಿಗೆ RPL ತರಬೇತಿಯನ್ನು ನೀಡುವ ಗುರಿಯನ್ನು ಮಂಡಳಿ ಹೊಂದಿದ್ದು. 2020-21 ನೇ ಸಾಲಿನಲ್ಲಿ ಆರ್.ಪಿ.ಎಲ್ ಯೋಜನೆಯಡಿ 6,776 ಫಲಾನುಭವಿಗಳಿಗೆ ಮಂಡಳಿಯ ವತಿಯಿಂದ ತರಬೇತಿ ನೀಡಲಾಗಿದೆ.<br><br>ಜಿಲ್ಲಾವಾರು ವಿವರವನ್ನು **ಅನುಬಂಧ-01 ಮತ್ತು 02** ರಲ್ಲಿ ಲಗತ್ತಿಸಿದೆ. |

**ಕಾಇ 561 ಎಲ್‌ಇಟಿ 2021**

(ಅರಬೈಲ್ ಶಿವರಾಮ ಹೆಬ್ಬಾರ್)
ಕಾರ್ಮಿಕ ಸಚಿವರು

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 1179ಕ್ಕೆ ಅನುಬಂಧ-01

| ಶ್ರಮ ಸಾಮರ್ಥ್ಯ ಯೋಜನೆಯಡಿ 2019-20 ನೇ ಸಾಲಿನಲ್ಲಿ ತರಬೇತಿಯ ಪಡೆದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಜಿಲ್ಲಾವಾರು ವಿವರ | | |
|---|---|---|
| ಕ್ರ.ಸಂ | ನಿರ್ಮಿತಿಕೇಂದ್ರ | ತರಬೇತಿ ಪಡೆದ ಫಲಾನುಭವಿಗಳ ಸಂಖ್ಯೆ |
| 1 | ಬಳ್ಳಾರಿ | 179 |
| 2 | ವಿಜಯಪುರ | 230 |
| 3 | ಚಿಕ್ಕಬಳ್ಳಾಪುರ | 64 |
| 4 | ಚಿತ್ರದುರ್ಗ | 285 |
| 5 | ಉಡುಪಿ | 177 |
| 6 | ಗದಗ | 197 |
| 7 | ಕಲಬುರಗಿ | 205 |
| 8 | ದಾವಣಗೆರೆ | 212 |
| 9 | ಕೋಲಾರ | 341 |
| 10 | ಕೊಪ್ಪಳ | 748 |
| 11 | ಮೈಸೂರು | 117 |
| 12 | ರಾಮನಗರ | 124 |
| 13 | ತೂಮಕೂರು | 88 |
| 14 | ಯಾದಗಿರಿ | 88 |
| 15 | ರಾಯಚೂರು | 60 |
| 16 | ಬೆಂಗಳೂರು ನಗರ | 190 |
| 17 | ಬೆಂಗಳೂರು ಗ್ರಾಮಾಂತರ | 63 |
| 18 | ಹಾವೇರಿ | 419 |
| 19 | ಕಾರವಾರ | 175 |
| 20 | ಕ್ಯಾಷ್ಯೂಟೆಕ್, ರಾಯಚೂರು | 267 |
| 21 | ಧಾರವಾಡ-ಟಾಟಾ ಹಿಟಾಚಿ | 10 |
| ಒಟ್ಟು | | **4239** |

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 1179ಕ್ಕೆ **ಅನುಬಂಧ-02**

| ಆರ್.ಪಿ.ಎಲ್ (R.P.L) ಯೋಜನೆಯಡಿ 2020-21 ನೇ ಸಾಲಿನಲ್ಲಿ ತರಬೇತಿಯ ಪಡೆದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಜಿಲ್ಲಾವಾರು ವಿವರ | | |
|---|---|---|
| ಕ್ರ.ಸಂ | ಜಿಲ್ಲೆ | ತರಬೇತಿ ಪಡೆದ ಫಲಾನುಭವಿಗಳ ಸಂಖ್ಯೆ. |
| 1 | ಬಳ್ಳಾರಿ | 3471 |
| 2 | ಬೆಂಗಳೂರು | 232 |
| 3 | ಚಾಮರಾಜನಗರ | 1560 |
| 4 | ಹಾವೇರಿ | 404 |
| 5 | ಮಂಡ್ಯ | 343 |
| 6 | ಮೈಸೂರು | 345 |
| 7 | ತುಮಕೂರು | 421 |
| ಒಟ್ಟು | | 6776 |